

ವಿಶ್ವವಿಖ್ಯಾತ ಕ್ರಿಕೆಟಿಗರಾದ ಕಪಿಲ್‌ದೇವ್ ಅವರ ಅನುಭವವನ್ನು ಉಲ್ಲೇಖಿಸುತ್ತೇನೆ. ಕಪಿಲ್‌ದೇವ್ ಅವರು ಒಬ್ಬ ಕಟ್ಟಿಗೆ (ಸೌದೆ) ವ್ಯಾಪಾರಿಯ ಮಗ. ಸಾಮಾಜಿಕವಾಗಿ 'ಶ್ರೇಷ್ಠ' ಶ್ರೇಣಿಗೆ ಸೇರಿದವರಲ್ಲ. ಇಂಗ್ಲಿಷನ್ನೂ ಸರಿಯಾಗಿ ಕಲಿತಿರಲಿಲ್ಲ. ತನಗೆ ಇಂಗ್ಲಿಷ್ ಸರಿಯಾಗಿ ಬಾರದೆ ಇದ್ದದ್ದಕ್ಕೆ ಸಹ ಕ್ರೀಡಾಪಟುಗಳಿಂದ ಅನುಭವಿಸಿದ ಮುಜುಗರ ಮತ್ತು ಅವಮಾನದ ಬಗ್ಗೆ ಅವರೇ ಒಂದು ಪುಸ್ತಕದಲ್ಲಿ ಹೇಳಿದ್ದಾರೆ. ಅದು ಅವರ ಸಾಧನೆ ಕುರಿತ ಒಂದು ಚಿಕ್ಕ ಪುಸ್ತಕ. ಭಾಷಿಕ ಶ್ರೇಷ್ಠತೆಯ ತಾರತಮ್ಯ, ಅವಮಾನದ ಅನುಭವದ ಜೊತೆಗೆ ಕಪಿಲ್ ದೇವ್ ಅವರನ್ನು 'ಉತ್ತಮ ಆಟಗಾರ ಆದರೆ ಉತ್ತಮ ಕ್ಯಾಪ್ಟನ್ ಅಲ್ಲ' ಎಂದು ಬರೆದ ಲೇಖನಗಳನ್ನು ನಾನು ಕ್ರೀಡಾ ಪತ್ರಿಕೆಗಳಲ್ಲಿ ಓದಿದ್ದೇನೆ. ಮೊಟ್ಟಮೊದಲ ವಿಶ್ವಕಪ್ ಗೆದ್ದುಕೊಟ್ಟ ಕಪಿಲ್‌ಗೆ ಉತ್ತಮ ಕ್ಯಾಪ್ಟನ್ ಎಂಬ ಪ್ರಶಂಸೆಯನ್ನು 'ಕೊಡಮಾಡಲು' ಚೌಕಾಸಿ ಮಾಡಿದ್ದು ಶ್ರೇಷ್ಠತೆಯ ಒಂದು ವಿಪರ್ಯಾಸ! ಕಪಿಲ್ ಉತ್ತಮ ಕ್ಯಾಪ್ಟನ್ ಅಲ್ಲ, ಉತ್ತಮ ಆಟಗಾರ ಎಂಬ ಹೇಳಿಕೆಯನ್ನು ಓದಿದಾಗ ನನಗೆ ತಕ್ಷಣ ನೆನಪಿಗೆ ಬಂದದ್ದು ಕುವೆಂಪು ಅವರ ಬಗ್ಗೆ 'ಮಹಾಕವಿಯಲ್ಲ, ಮಹಾಕಾದಂಬರಿಕಾರರು' ಎಂದು ನಂಬಿಸಲು ಹೊರಟ ಶ್ರೇಷ್ಠರ ಆಟ.

ಇಂಗ್ಲಿಷ್ ವಿಷಯ ಬಿಡಿ, ಕನ್ನಡ ಬಳಕೆಯ ಬಗ್ಗೆಯೂ ಪಕ್ಷಪಾತದ ಹೇಳಿಕೆಗೆ ಗುರಿಯಾದ ಉದಾಹರಣೆಯಿದೆ. ಸುಮಾರು ನಾಲ್ಕು ದಶಕಗಳ ಹಿಂದೆ, ರಾಜಕುಮಾರ್ ಅವರ ಕನ್ನಡದ ಉಚ್ಚಾರ ಕುರಿತು ಒಂದು ಪತ್ರಿಕೆ ಏನು ಬರೆಯಿತು ಗೊತ್ತೆ? ರಾಜಕುಮಾರ್ ಅವರಿಗೆ ಕನ್ನಡದಲ್ಲಿ 'ಅ' ಕಾರ 'ಹ' ಕಾರದ ವ್ಯತ್ಯಾಸವೇ ಗೊತ್ತಿಲ್ಲವೆಂದೂ ಕನ್ನಡದ ಉಚ್ಚಾರ ಸರಿಯಿಲ್ಲವೆಂದೂ ಬರೆಯಿತು. ಪೂರ್ವಗ್ರಹ ಪ್ರತಿಷ್ಠೆಗೆ ಇದಕ್ಕಿಂತ 'ಶ್ರೇಷ್ಠ' ಉದಾಹರಣೆ ಬೇಕಿಲ್ಲ. ಯಾಕೆಂದರೆ ರಾಜಕುಮಾರ್ ಅವರ ಕನ್ನಡ ಭಾಷೋಚ್ಚಾರದಲ್ಲಿ ಹುಳುಕು ಹುಡುಕಲು ಸಾಧ್ಯವೇ ಇಲ್ಲ. ಅವರ ಕನ್ನಡ ಅಷ್ಟು ಸೊಗಸಾಗಿದೆಯೆಂದು ಹಸುಗೂಸಿಗೂ ಗೊತ್ತಾಗುತ್ತದೆ.

ಇರಲಿ; ಈ ಎಲ್ಲ ನಿದರ್ಶನಗಳು ಏನನ್ನು ಫಲಿಸುತ್ತವೆ? ಶ್ರೇಷ್ಠತೆಯೆಂಬುದು ಶುದ್ಧಾಂಗ ಸ್ವತಂತ್ರ ಕಲ್ಪನೆಯಲ್ಲ; ಅದಕ್ಕೆ ಸಾಂಸ್ಕೃತಿಕ ಆಯಾಮವಿರುವಂತೆಯೇ ಸಾಮಾಜಿಕ ಶ್ರೇಣಿಯ ಸ್ತರವೂ ಇದೆ, ಸೊಕ್ಕೂ ಇದೆ. ಹಾಗಾದರೆ ಶ್ರೇಷ್ಠತೆಯನ್ನು ಬಯಸುವುದೇ ತಪ್ಪೆ? ಖಂಡಿತ ತಪ್ಪಲ್ಲ. ಆದರೆ, ಶ್ರೇಷ್ಠತೆಯೆನ್ನುವುದು ಇದ್ದಕ್ಕಿದ್ದಂತೆ ತಲುಪುವ ಜಿಗಿತವಲ್ಲ; ತಾನು ಎಲ್ಲರಿಗಿಂತ ಮತ್ತು ಎಲ್ಲಕ್ಕಿಂತ ಮೇಲುಸ್ತರದಲ್ಲಿದ್ದೇನೆಂದು ಭ್ರಮಿಸುವ ಸೊಕ್ಕಲ್ಲ. ಶ್ರೇಷ್ಠತೆಯ ಸೊಕ್ಕು ಹೊಸ ಪ್ರತಿಭೆಗಳು ಬೆಳೆಯುವುದಕ್ಕೂ ಅಡ್ಡಿಯಾಗುತ್ತದೆ. ಪ್ರತಿಭೆಗಳ ಹುಟ್ಟಿಗೂ ಅಡ್ಡಿ ಮಾಡುತ್ತದೆ. ಬರೆದರೆ ಶ್ರೇಷ್ಠವಾದದ್ದನ್ನೇ ಬರೆಯಬೇಕು, ಶ್ರೇಷ್ಠವಾದದ್ದನ್ನೇ ಪ್ರಕಟಿಸಬೇಕು ಎಂದು ಬಯಸುತ್ತದೆ. ಇಂಥ ಬಯಕೆಗೆ ಭಯ ಬಿದ್ದವರು ಬರೆಯುವುದಕ್ಕೇ ಹೆದರಬಹುದು. ಆಗ ಶ್ರೇಷ್ಠತೆಯ ಸೊಕ್ಕು ಪ್ರತಿಭೆಗಳ ಭ್ರೂಣಹತ್ಯೆಗೆ ಕಾರಣವಾಗುತ್ತದೆ.

ಶ್ರೇಷ್ಠತೆಯ ಬಗ್ಗೆ ಮಾತಾಡುವಾಗ ಅಥವಾ ಬರೆಯುವಾಗ ಕೆ.ವಿ.ಸುಬ್ಬಣ್ಣನವರು 1990ರಲ್ಲಿ ಮಾತಾಡಿದ, ಬರೆದ, 'ಶ್ರೇಷ್ಠತೆಯ ವ್ಯಸನ'ವೆಂಬ